15ನೇ ವಿಪ ಲಿ SL.NO: 70 ದಿ: 18.03.2026

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಎಂ.ಜಿ. ಮುಳೆ ಇವರು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.**

**ವಿಷಯ:** **ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ ತಾಲ್ಲೂಕಿನಲ್ಲಿ ಕಾಳಿ ನದಿಯಿಂದ ಕೆರೆ ಮತ್ತು ಬಾಂದಾರ ತುಂಬಿಸುವ ಏತ ನೀರಾವರಿ ಯೋಜನೆಯು ಕಳೆದ 9 ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ಸುಮಾರು ರೂ.220.00 ಕೋಟಿಗೂ ಅಧಿಕ ವೆಚ್ಚದ ಈ ಯೋಜನೆಯು 2025ರ ವೇಳೆಗೆ ಪೂರ್ಣಗೊಳ್ಳಬೇಕಿತ್ತು. ಆದರೆ, ತಾಲ್ಲೂಕಿನ 19 ಬಾಂದಾರಗಳು ಮತ್ತು 46 ಕೆರೆಗಳಿಗೆ ನೀರು ತುಂಬಿಸುವ ಕೆಲಸ ಅರ್ಧಕ್ಕೆ ನಿಂತು ರೈತರು ಹತಾಶರಾಗಿದ್ದಾರೆ. ಈ ವಿಳಂಬದಿಂದಾಗಿ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿದೆ. ಕುಡಿಯುವ ನೀರಿಗೆ ಹಾಹಾಕಾರ ಶುರುವಾಗಿದೆ ಮತ್ತು ಬೋರ್ ವೆಲ್‌ಗಳ ಅಂತರ್ಜಲ ಮಟ್ಟ ತೀವ್ರವಾಗಿ ಕುಸಿದಿದೆ. ಯೋಜನೆಯ ವಿಳಂಬವನ್ನು ಖಂಡಿಸಿ ರೈತ ಸಂಘಟನೆಗಳು ಇತ್ತೀಚೆಗೆ ಫೆಬ್ರವರಿ 27 ರಿಂದ ಮಾರ್ಚ್ 9 ರವರೆಗೆ 11 ದಿನಗಳ ಕಾಲ ಬೃಹತ್ ಪಾದಯಾತ್ರೆ ನಡೆಸಿದೆ.**

**ಮಾನ್ಯ ಜಲಸಂಪನ್ಮೂಲ ಸಚಿವರು ಕಾಲಮಿತಿಯೊಳಗೆ ಹಳಿಯಾಳದ ಕೆರೆಗಳಿಗೆ ನೀರು ಹರಿಸುವ ಮೂಲಕ ರೈತರ ಹಿತ ಕಾಯಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.**

**ಉತ್ತರ:**

ಕಾಳಿ ನದಿಯಿಂದ 0.812 ಟಿ.ಎಂ.ಸಿ. ನೀರನ್ನು ಎತ್ತಿ ಹಳಿಯಾಳ ತಾಲೂಕಿನ 46 ಕೆರೆಗಳು ಹಾಗೂ ತಟ್ಟಿಹಳ್ಳದ ಮೇಲಿನ 19 ಬಾಂಧಾರಗಳನ್ನು ತುಂಬಿಸುವ ಯೋಜನೆಯ ರೂ.220.00 ಕೋಟಿಗಳ ಮೊತ್ತಕ್ಕೆ ಸರ್ಕಾರದ ಆದೇಶ ದಿನಾಂಕ 29.06.2017ರಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿರುತ್ತದೆ. ಸದರಿ ಯೋಜನೆಯಡಿ ಕೆರೆಗಳನ್ನು ಹಾಗೂ ಬಾಂಧಾರಗಳನ್ನು ತುಂಬುವುದರಿಂದ ಹಳಿಯಾಳ ತಾಲೂಕಿನ ಸಣ್ಣ ನೀರಾವರಿ ಕೆರೆಗಳು ಹಾಗೂ ಬಾಂಧಾರಗಳ ಅವಲಂಭಿತ ಕೃಷಿ ಪ್ರದೇಶಕ್ಕೆ ಪ್ರತಿವರ್ಷ ಜನವರಿಯಿಂದ ಜೂನ್ ತಿಂಗಳವರೆಗೆ ನೀರಾವರಿ ಸೌಲಭ್ಯ, ಜನ-ಜಾನುವಾರುಗಳಿಗೆ ಕುಡಿಯುವ ನೀರು ಹಾಗೂ ಅಂತರ್ಜಲ ಮರು ಪೂರಣ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದೆ.

ಈ ಯೋಜನೆಯನ್ನು 2018ನೇ ಸಾಲಿನಲ್ಲಿ 2 ಹಂತಗಳಲ್ಲಿ ಕೈಗೊಳ್ಳಲು ಗುತ್ತಿಗೆ ವಹಿಸಲಾಗಿದ್ದು, 1ನೇ ಹಂತದಲ್ಲಿ ದಾಂಡೇಲಿ ನಗರದ ಸರಹದ್ದಿನ ಕಾಳಿ ನದಿಯ ದಂಡೆಯ ಮೇಲೆ ಜಾಕವೆಲ್ ಪಂಪ್ ಹೌಸ್ ಹಾಗೂ ವಿದ್ಯುತ್ ಉಪ-ಕೇಂದ್ರ ನಿರ್ಮಾಣ ಹಾಗೂ ಅಲ್ಲಿಂದ ಬಲೋಗಾ ಗ್ರಾಮದ ಹತ್ತಿರ 2ನೇ ಹಂತದ ಜಾಕವೆಲ್ ಪಂಪ್‌ಹೌಸ್‌ಗೆ ನೀರನ್ನು ಪಂಪ್ ಮಾಡಲು ಉದ್ದೇಶಿಸಲಾಗಿರುತ್ತದೆ. 1ನೇ ಹಂತದಲ್ಲಿ 2 ಕೆರೆಗಳು ಹಾಗೂ 13 ಬಾಂದಾರಗಳಿಗೆ ನೀರನ್ನು ತುಂಬಿಸಲಾಗುವುದು. 2ನೇ ಹಂತದಲ್ಲಿ 2 ಫೀಡರ್‌ಗಳು ಇದ್ದು, 1ನೇ ಫೀಡರ್‌ನಲ್ಲಿ 11 ಕೆರೆಗಳು ಹಾಗೂ 2ನೇ ಫೀಡರ್‌ನಲ್ಲಿ 33 ಕೆರೆಗಳು ಮತ್ತು 6 ಬಾಂದಾರಗಳಿಗೆ ನೀರನ್ನು ತುಂಬಿಸಲಾಗುವುದು.

ಸದರಿ ಯೋಜನೆಯಡಿ ಭೂಸ್ವಾಧೀನ ಸಮಸ್ಯೆ, ಕೋವಿಡ್-19, ಅತಿವೃಷ್ಟಿ ಮತ್ತು ಆರ್.ಎ. ಬಿಲ್ಲುಗಳ ಪಾವತಿಯಲ್ಲಿ ಹಾಗೂ ಇನ್ನಿತರ ತಾಂತ್ರಿಕ ಕಾರಣಗಳಿಂದ ವಿಳಂಬವಾಗಿರುತ್ತದೆ. ಪ್ರಸ್ತುತ ಯೋಜನೆಯ ಎರಡೂ ಹಂತಗಳಲ್ಲಿ ಪಂಪ್‌ಹೌಸ್/ಸಬ್ ಸ್ಟೇಷನ್ ನಿರ್ಮಾಣ ಮತ್ತು ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಯೋಜನೆಯ 2ನೇ ಹಂತಕ್ಕೆ ಸಂಬಂಧಿಸಿದಂತೆ ವಿದ್ಯುತ್ ಚಾರ್ಜ್ ಮಾಡಲು ಆದೇಶ ದೊರೆತ ಕೂಡಲೇ ಸಂಬಂಧಿತ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ, 20-25 ದಿನಗೊಳಗಾಗಿ ಯೋಜನೆಯನ್ನು ಪರೀಕ್ಷಾರ್ಥ ಚಾಲನೆಗೊಳಿಸಲಾಗುವುದು.

(ಸಂಖ್ಯೆ:ಜಸಂಇ 43 ಡಬ್ಲ್ಯೂಬಿಎಂ 2026)

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**